ದಿನಾಂಕ : 14-08-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:ಆರೋಪಿ ಪರ ಶ್ರೀ. ಎ.ಸಿ.ಕೆ ವಕೀಲರಿಂದ**

ನಾನು ಪ್ರಥಮ ಪಿ.ಯು.ಸಿ ವರೆಗೆ ಓದಿದ್ದೇನೆ. ನಾನು ಗುಂಜಾನಟ್ಟಿ ಕಾಲೇಜನಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಪ್ರಥಮ ಪಿ.ಯು.ಸಿ ಕಲಿಯುವಾಗ ನನಗೆ 18 ವರ್ಷ ನಡೆಯುತ್ತಿತ್ತು. ನಾನು ಒಂದನೇ ತರಗತಿಯಿಂದ 10 ನೇ ತರಗತಿಯವರೆಗೂ ನಿರಂತರವಾಗಿ ತೇರ್ಗಡೆಯಾಗಿತ್ತಾ ಬಂದಿದ್ದೇನೆ. ನಾನು ಯಾವುದೇ ವರ್ಷದಲ್ಲಿ ಅನುತ್ತೀರ್ಣಳಾಗಿರುವುದಿಲ್ಲ. ನಾನು 2016 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪಾಸಾಗಿದ್ದೇನೆ.

2. ಈಗ ಮೂರು ವರ್ಷಗಳಿಂದ ನಾನು ಮೊಬೈಲ ಬಳಕೆ ಮಾಡುತ್ತಿದ್ದೇನೆ. ನಾನು ಏರಟೆಲ್ ಸಿಮ್ ಬಳಸುತ್ತಿದ್ದೇನು. ನನ್ನ ಮೊಬೈಲ ನಂಬರ 9742623936 ಆಗಿರುತ್ತದೆ. ಈ ನಂಬರನ ಸಿಮ್ ನನ್ನ ಹೆಸರಿನಲ್ಲಿದೆ. ನಾನು ಟೆಕ್ನೋಸ್ಪಾರ್ಕ ಮೊಬೈಲನ್ನು ಹೊಂದಿದ್ದೇನು. ಆರೋಪಿ ನನಗೆ ಇನ್‌ಸ್ಟಾಗ್ರಾಮನಲ್ಲಿ ಪರಿಚಯ ಆಗಿದ್ದು, ಆರೋಪಿಯ ಇನಸ್ಟಾಗ್ರಾಮ ಐಡಿ ವಿವರಗಳು ನನಗೆ ಗೊತ್ತಿರುತ್ತದೆ. ಆರೋಪಿಯ ಇನ್‌ಸ್ಟಾಗ್ರಾಮ ಐಡಿಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ನನ್ನ ಇನ್‌ಸ್ಟಾಗ್ರಾಮ ಐಡಿಯನ್ನೂ ಸಹ ಪೋಲಿಸರಿಗೆ ನೀಡಿರುವುದಿಲ್ಲ. ನನಗೆ ದಿನಾಂಕ ನೆನಪಿರುವುದಿಲ್ಲ. 2020 ಡಿಸೆಂಬರನಲ್ಲಿ ಆರೋಪಿ ನನಗೆ ಇನ್‌ಸ್ಟಾಗ್ರಾಮನಲ್ಲಿ ಪರಿಚಯ ಆಗಿದ್ದಾನೆ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುವುದಿಲ್ಲ.

3. ನಾನು ಮತ್ತು ಆರೋಪಿ ಎಲ್ಲಿ ಭೇಟಿ ಆಗುತ್ತಿದ್ದೇವು ಎಂದು ನಾನು ಪೋಲಿಸರಿಗೆ ಹೇಳಿದ್ದೇನೆ. ನಾನು ಆರೋಪಿಯನ್ನು ಭೇಟಿ ಆಗುತ್ತಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪ್ರಶ್ನೆಃ** ಆರೋಪಿ ನಿಮಗೆ ಇನ್‌ಸ್ಟಾಗ್ರಾಮನಲ್ಲಿ ನಿನ್ನನ್ನು ಇಷ್ಟಪಡುತ್ತೇನೆ, ಮದುವೆ

ಮಾಡಿಕೊಳ್ಳುತ್ತೇನೆ ಎಂದು ಮೇಸೆಜ್ ಮಾಡಿದ್ದಾರೇ ?

**ಉತ್ತರಃ** ಆ ರೀತಿ ಮಾಡಿರುವುದಿಲ್ಲ, ಆದರೆ ಫೋನ ಕಾಲ ಮಾಡಿದಾಗ ನನಗೆ ಹೇಳುತ್ತಿದ್ದರು.

4. 2023 ಜೂನನಲ್ಲಿ ಆರೋಪಿ ನನಗೆ ಫೋನ ಕಾಲ ಮಾಡಿ ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದರು, ಆದರೆ ನನಗೆ ದಿನಾಂಕ ಗೊತ್ತಿರುವುದಿಲ್ಲ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುವುದಿಲ್ಲ ಎಂದು ಸೂಚಿಸುವುದು ಸರಿ.

5. ಆರೋಪಿ ನನಗೆ 2023 ಜೂನ ತಿಂಗಳಿನಲ್ಲಿ ನನಗೆ ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿರುವುದಿಲ್ಲ ಆ ಕಾರಣ ನಾನು ಆ ವಿಚಾರವನ್ನು ಪೋಲಿಸರಿಗೆ ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ.

6. ದಿನಾಂಕಃ 11-12-2023 ರಂದು ಸಂಜೆ 6:00 ಗಂಟೆಗೆ ಆರೋಪಿ ನನಗೆ ಫೋನ ಮಾಡಿ ನನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದನು. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ, ಆರೋಪಿ ನನಗೆ ಫೋನ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ.

7. ಆರೋಪಿ ಮತ್ತು ನಾನು ಸೇರಿದ್ದ ವಿಚಾರ ನಾನು ಯಾರಿಗೂ ಹೇಳಿರುವುದಿಲ್ಲ, ಆದರೆ ಪರಶುರಾಮ ರಾಮಜಿ ಅವರಿಗೆ ಗೊತ್ತಿರುತ್ತದೆ. ಅವರು ಗ್ರಾಮ ಪಂಚಾಯತಿ ಉಪಾಧ್ಯಕ್ಷರು. ಆರೋಪಿ ನನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದ ವಿಚಾರ ಪರಶುರಾಮ ರಾಮಜಿ ಅವರಿಗೆ ಗೊತ್ತಿರುತ್ತದೆ, ಬೇರೆಯವರಿಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಪರಶುರಾಮ ರಾಮಜಿ ಅವರು ನಾನೇ ಮುಂದೆ ನಿಂತು ರಜಿಸ್ಟರ ಮದುವೆ ಮಾಡಿಸುತ್ತೇನೆ ಎಂದು ಹೇಳಿ ನನ್ನ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಯಾವ ಯಾವ ದಾಖಲೆಗಳನ್ನು ನೀಡಿದ್ದೀರಿ ಎಂದು ಕೇಳಲಾಗಿ ಸಾಕ್ಷಿ ಎಸ್.ಎಸ್.ಎಲ್.ಸಿ ಮಾರ್ಕ್ಸ ಕಾರ್ಡ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ ಕಾರ್ಡ, ರೇಶನ ಕಾರ್ಡ,

ಸ್ಕೂಲ ಲಿವಿಂಗ್ ಸರ್ಟಿಫಿಕೇಟ್ ನೀಡಿದ್ದೇನೆ ಎಂದು ಹೇಳಿದ್ದಾರೆ.

ಪ್ರಶ್ನೆಃ ಪರಶುರಾಮ ರಾಮಜಿ ಎನ್ನುವವರು ನಿಮಗೆ ಹೇಗೆ ಪರಿಚಯ?
ಉತ್ತರಃ ಆರೋಪಿ ಸಂಜು ಡಬಾಲಿ ಅವರ ಸ್ನೇಹಿತ.

8. ಪರಶುರಾಮ ರಾಮಜಿ ಎನ್ನುವವರು ನಮ್ಮ ತಂದೆಯ, ನಮ್ಮ ಕುಟುಂಬದ ಪರಿಚಯಸ್ಥರಲ್ಲ. ನನ್ನಿಂದ ಪರಶುರಾಮ ರಾಮಜಿ ಅವರು ದಾಖಲೆಗಳನ್ನು ಪಡೆದ ವಿಚಾರವನ್ನು ಪೋಲಿಸರಿಗೆ ಹೇಳಿರುವುದಿಲ್ಲ.

9. ಡಿಸೆಂಬರ 8, 2023 ರಂದು ನಾನು ಪರಶುರಾಮ ರಾಮಜಿ ಅವರಿಗೆ ದಾಖಲೆಗಳನ್ನು ನೀಡಿದ್ದೇನೆ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಸತ್ಯವನ್ನು ಹೇಳುತ್ತಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ.

ಪ್ರಶ್ನೆಃ ಆರೋಪಿ ಸಂಜು ಯಾವ ಊರಿನಲ್ಲಿದ್ದಾರೆ ಎಂದು ಗೊತ್ತಿದಿಯಾ?
ಉತ್ತರಃ ಕೊಡಚವಾಡದಲ್ಲಿದ್ದಾರೆ.

10. ನಮ್ಮ ಊರಿನಿಂದ ಕೊಡಚವಾಡ ಎಷ್ಟು ದೂರದಲ್ಲಿದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ನಮ್ಮೂರಿನಿಂದ ಕೊಡಚವಾಡ ಗ್ರಾಮಕ್ಕೆ ಬೈಕನಲ್ಲಿ ಹೋದರೆ ಒಂದು ಗಂಟೆ ಆಗಬಹುದು.

ಪ್ರಶ್ನೆಃ ಆರೋಪಿ ಸಂಜು ಅವರ ಕುಟುಂಬದ ಬಗ್ಗೆ ನಿಮಗೆ ಮಾಹಿತಿ ಇದೆಯೆ?
ಉತ್ತರಃ ಆರೋಪಿಯ ತಂದೆ, ತಾಯಿ, ಆರೋಪಿಯ ಅಣ್ಣ ಇದ್ದಾರೆ.
ಪ್ರಶ್ನೆಃ ಆರೋಪಿಯ ಅಣ್ಣ ಏನು ಮಾಡುತ್ತಾರೆ?

ಉತ್ತರಃ ಪೂನಾದಲ್ಲಿ ಕಂಪನಿಯಲ್ಲಿ ಕೆಲಸದಲ್ಲಿದ್ದಾರೆ.

ಪ್ರಶ್ನೆಃ ಆರೋಪಿಯ ಏನು ಕೆಲಸ ಮಾಡುತ್ತಾರೆ?
ಉತ್ತರಃ ಆರೋಪಿ ಕೊಡಚವಾಡ ಗ್ರಾಮ ಪಂಚಾಯತಿಯಲ್ಲಿ ವಾಟರಮನ್ ಆಗಿದ್ದಾರೆ.

11. ನಾನು ಯಾವಾಗಲೂ ಕೊಡಚವಾಡ ಗ್ರಾಮ ಪಂಚಾಯತಿಗೆ ಹೋಗಿರುವುದಿಲ್ಲ. ಆರೋಪಿಯ ಸಂಬಂಧಿಕರು ನನಗೆ ಪರಿಚಯ ಇರುತ್ತಾರೆ. ಆರೋಪಿಯ ಮೌಸಿ [ಚಿಕ್ಕಮ್ಮ] ಲಕ್ಷ್ಮೀದೇವಿ ಮತ್ತು ಅವರ ಮಗ ಪ್ರೇಮ್ ನನಗೆ ಪರಿಚಯ ಇರುತ್ತಾರೆ.

12. ದಿನಾಂಕಃ 12-12-2023 ರಲ್ಲಿ ಆರೋಪಿ ನನ್ನನ್ನು ಪಾರ್ಲೆ ಗ್ರಾಮದಲ್ಲಿರುವ ಅವರ ಚಿಕ್ಕಮ್ಮ ಲಕ್ಷ್ಮೀದೇವಿ ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿದ್ದನು. ನಾನು ಅವರ ಮನೆಗೆ ಹೋದಾಗ ಅವರ ಮನೆಯಲ್ಲಿ ಲಕ್ಷ್ಮೀದೇವಿ ಮತ್ತು ಅವರ ಮಗ ಪ್ರೇಮ್ ಮಾತ್ರ ಇದ್ದರು. ಲಕ್ಷ್ಮೀದೇವಿ ಅವರ ಗಂಡ ಮತ್ತು ಮಗಳು ಇದ್ದಾರೆ, ಆದರೆ ಆ ದಿನ ಇರಲಿಲ್ಲ.

13. ದಿನಾಂಕಃ 12-12-2023 ರಂದು ಆರೋಪಿ ನನ್ನನ್ನು ಪಾರ್ಲೆ ಗ್ರಾಮದಲ್ಲಿರುವ ಚಿಕ್ಕಮ್ಮನ ಮನೆಗೆ ಕರೆದುಕೊಂಡು ಹೋಗಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಆ ದಿನ ಆರೋಪಿಯ ತಂದೆ ಸಹ ಲಕ್ಷ್ಮೀದೇವಿ ಅವರ ಮನೆಗೆ ಬಂದಿದ್ದರು. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಅಲ್ಲಿಗೆ ಬಂದಿದ್ದರು, ನನ್ನನ್ನು ಮಾತನಾಡಿಸಿಕೊಂಡು ಹೋಗಿದ್ದಾರೆ ಎಂದು ಹೇಳಿದ್ದಾರೆ. ಈ ವಿಚಾರವನ್ನು ನಾನು ದೂರು ನೀಡುವಾಗ ಪೋಲಿಸರಿಗೆ ಹೇಳಿದ್ದೇನೆ.

14. ನಾನು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಆರೋಪಿಯ ತಂದೆ ಬಂದಿದ್ದರು

ಎಂದು ಮಾತ್ರ ಹೇಳಿದ್ದೇನೆ, ಆದರೆ ಪೂರ್ಣ ವಿವರ ಹೇಳಿರುವುದಿಲ್ಲ.

15. ಆರೋಪಿ ನನ್ನನ್ನು ಬೋಗಾರವೇಸ್ ರಸ್ತೆಯಿಂದ ಪಾರ್ಲೆ ಊರಿಗೆ ಕರೆದುಕೊಂಡು ಹೋದನು. ಆರೋಪಿ ನನ್ನನ್ನು ಅವರ ಚಿಕ್ಕಮ್ಮನ ಮನೆಗೆ ರಾತ್ರಿ ವೇಳೆಯಲ್ಲಿ ಕರೆದುಕೊಂಡು ಹೋಗಿದ್ದನು, ಆ ಕಾರಣ ನನಗೆ ಚೆಕಬಂದಿಯನ್ನು ಹೇಳಲು ಆಗುವುದಿಲ್ಲ. ಅದು ಹಂಚಿನ ಮನೆ ಆಗಿತ್ತು ಮತ್ತು ಅಕ್ಕಪಕ್ಕದಲ್ಲಿ 3-4 ಮನೆಗಳು ಇದ್ದವು. ಆ ಮನೆಯವರೆಲ್ಲ ಆರೋಪಿಯ ಸಂಬಂಧಿಕರೇ ಇದ್ದರು. ಆ ದಿನ ಅವರುಗಳು ಯಾರೂ ನನ್ನನ್ನು ಭೇಟಿ ಮಾಡಿಲ್ಲ.

16. ದಿನಾಂಕಃ 11-12-2023 ರಂದು ಪೀರಣವಾಡಿಯಿಂದ ಸಂಜೆ 7:00 ಗಂಟೆಗೆ ಹೊರಟಿದ್ದು ರಾತ್ರಿ 9:00 ಗಂಟೆಗೆ ಪಾರ್ಲೆ ಊರಿಗೆ ತಲುಪಿದ್ದೇವು.

ಪ್ರಶ್ನೆಃ ಯಾವ ಸ್ಥಳದಿಂದ ನೀವು ಹೊರಟಿದ್ದೀರಿ?
ಉತ್ತರಃ ಸಚಿನ್ ಪಾಟೀಲ ಮಂಗೇಶ ಆಸ್ಪತ್ರೆಯ ಮುಂಭಾಗದಿಂದ ಆರೋಪಿ ನನ್ನನ್ನು ಕರೆದುಕೊಂಡು ಹೋದನು.

17. ಈ ವಿಚಾರದಲ್ಲಿ ನೀವು ಸುಳ್ಳು ಹೇಳುತ್ತಿದ್ದೀರಿ ಆರೋಪಿ ನಿಮ್ಮನ್ನು ಕರೆದುಕೊಂಡು ಹೋಗಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ನನ್ನನ್ನು ಕರೆದುಕೊಂಡು ಹೋಗಿದ್ದಾನೆ ಎಂದು ಹೇಳಿದ್ದಾರೆ.

18. ದಿನಾಂಃ 11-12-2023 ರಂದು ಮನೆಯಲ್ಲಿ ನನಗೂ ಮತ್ತು ನಮ್ಮ ತಂದೆಗೂ ಜಗಳ ಆಗಿತ್ತು ಎನ್ನುವುದು ಸರಿ.

ಪ್ರಶ್ನೆಃ ಯಾವ ವಿಚಾರವಾಗಿ ಜಗಳವಾಗಿತ್ತು?

ಉತ್ತರಃ ನಾನು ಮನೆಯಲ್ಲಿ ಮೊಬೈಲ ಹೆಚ್ಚು ನೋಡುತ್ತೇನೆ ಎಂದು, ಮನೆಯಲ್ಲಿ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ನನಗೆ ಬೈದಿದ್ದರು.

19. ನನ್ನ ಕಾಕಾ ರಾಹುಲ ಹನುಮನ್ನವರೂ ಸಹ ನನಗೆ ಬುದ್ಧಿ ಹೇಳಿದ್ದರು ಎನ್ನುವುದು ಸರಿ. ಆ ದಿನ ನನ್ನ ತಂದೆ ಬೆಳಗ್ಗೆ 9:30 ಯಿಂದ 12:30 ಸಮಯದಲ್ಲಿ ನನಗೆ ಬೈದಿದ್ದರು ಮತ್ತು ನನ್ನ ಮೊಬೈಲನ್ನು ಅವರು ಕಸಿದುಕೊಂಡಿದ್ದರು. ನನ್ನ ತಂದೆ ನನ್ನ ಮೊಬೈಲ ಕಸಿದುಕೊಂಡ ನಂತರ ನಾನು ಏನೂ ಮಾಡಿರುವುದಿಲ್ಲ, ಮನೆಯಲ್ಲಿ ಸುಮ್ಮನೆ ಇದ್ದೇನು. ಆ ನಂತರ ನಾನು ಮೊಬೈಲನಲ್ಲಿ ಯಾರನ್ನೂ ಸಂಪರ್ಕಿಸಿರುವುದಿಲ್ಲ.

ಪ್ರಶ್ನೆಃ ನಿಮ್ಮ ತಂದೆ ಯಾವ ದಿನಾಂಕದಂದು ದೂರು ನೀಡಿದ್ದಾರೆ?

ಉತ್ತರಃ ದಿನಾಂಕಃ 12-12-2023 ರಂದು ದೂರು ನೀಡಿದ್ದಾರೆ.

ಪ್ರಶ್ನೆಃ ನಿಮ್ಮ ತಂದೆ ಏನೆಂದು ದೂರು ನೀಡಿದ್ದರು?

ಉತ್ತರಃ ನಾನು ಕಾಣೆಯಾಗಿದ್ದೇನೆ ಎಂದು ಮಿಸ್ಸಿಂಗ್ ಕಂಪ್ಲೇಂಟ್ ನೀಡಿದ್ದರು.

20. ನಾನು ಆರೋಪಿಯೊಂದಿಗೆ ಹೋಗಿದ್ದ ವಿಚಾರ ನಮ್ಮ ತಂದೆಗೆ ಗೊತ್ತಿರಲಿಲ್ಲ, ಆ ಕಾರಣ ಅವರು ನಾನು ಕಾಣೆಯಾಗಿದ್ದೇನೆ ಎಂದು ದೂರು ಕೊಟ್ಟಿದ್ದರು. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪ್ರಶ್ನೆಃ ನೀವು ಪಾರ್ಲೆ ಊರಿನಲ್ಲಿ ಎಷ್ಟು ದಿನ ಇದ್ದೀರಿ?

ಉತ್ತರಃ ಎರಡು ದಿನ ಇದ್ದೇನು.

21. ಆ ಎರಡು ದಿನ ನಿಮಗೆ ಏನೂ ತೊಂದರೆ ಆಗಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸಿದ್ದಾರೆ.

ಪ್ರಶ್ನೆಃ ಪಾರ್ಲೆ ಊರಿನಿಂದ ನೀವು ಯಾವಾಗ ಬಂದಿರುತ್ತೀರಿ?
ಉತ್ತರಃ ಡಿಸೆಂಬರ್ 13, 2023 ರಂದು ಸಿಟಿ ಬಸ್ ಸ್ಟ್ಯಾಂಡ್ ಬೆಳಗಾವಿಗೆ ಬಂದಿರುತ್ತೇನೆ.

ಪ್ರಶ್ನೆಃ ಆ ದಿನ ನೀವು ಪಾರ್ಲೆ ಊರಿನಿಂದ ಎಷ್ಟು ಗಂಟೆಗೆ ಹೊರಟಿದ್ದೀರಿ?
ಉತ್ತರಃ ಮಧ್ಯಾಹ್ನ 12:00 ಗಂಟೆಗೆ ಹೊರಟು ಮಧ್ಯಾಹ್ನ 3:00 ಗಂಟೆಗೆ ತಲುಪಿರುತ್ತೇವೆ.

ಪ್ರಶ್ನೆಃ ಪಾರ್ಲೆ ಊರಿನಿಂದ ನೀವು ಯಾವ ಕಾರಣಕ್ಕೆ ಹೊರಟಿದ್ದೀರಿ?
ಉತ್ತರಃನಮ್ಮ ಮನೆಯವರು ಮಿಸ್ಸಿಂಗ್ ಕಂಪ್ಲೇಂಟ್ ನೀಡಿದ್ದರಿಂದ ಬಂದಿದ್ದೇವೆ.

ಪ್ರಶ್ನೆಃ ಮಿಸ್ಸಿಂಗ್ ಕಂಪ್ಲೇಂಟ್ ವಿಚಾರ ನಿಮಗೆ ಹೇಗೆ ತಿಳಿಯಿತು?
ಉತ್ತರಃ ಆರೋಪಿಯ ತಂದೆ, ಆರೋಪಿಯ ಚಿಕ್ಕಮ್ಮ ಲಕ್ಷ್ಮೀದೇವಿ ಅವರ ಮನೆಗೆ ಬಂದು ಹೇಳಿದ್ದರು ಮತ್ತು ಲಕ್ಷ್ಮೀದೇವಿ ಅವರಿಗೂ ವಿಚಾರ ಗೊತ್ತಿತ್ತು.

ಪ್ರಶ್ನೆಃ ಆರೋಪಿಯ ತಂದೆ ಎಷ್ಟು ಗಂಟೆಗೆ ಬಂದು ಹೇಳಿದರು?
ಉತ್ತರಃ ಮಧ್ಯಾಹ್ನ 3:00 ಗಂಟೆಗೆ ಬಂದು ಹೇಳಿದರು.

22. ಆರೋಪಿ ನನ್ನನ್ನು ಪಾರ್ಲೆ ಊರಿಗೆ ಕರೆದುಕೊಂಡು ಹೋದನು ಎಂದು, ಅಲ್ಲಿ ಎರಡು ದಿನ ಇದ್ದೇನು ಎಂದು, ನಮ್ಮ ಮನೆಯವರು ಮಿಸ್ಸಿಂಗ್ ಕಂಪ್ಲೇಂಟ್ ಕೊಟ್ಟ ವಿಚಾರ ತಿಳಿದು ಆರೋಪಿ ನನ್ನನ್ನು ಕರೆದುಕೊಂಡು ಬಂದನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

23. ಪಾರ್ಲೆ ಊರಿನಿಂದ ನೀವು ಯಾವ ರೀತಿ ಬಂದಿದ್ದೀರಿ ಎನ್ನುವುದಕ್ಕೆ ಸಾಕ್ಷಿ ಆರೋಪಿ ನನ್ನನ್ನು ಬೈಕನಲ್ಲಿ ಕರೆದುಕೊಂಡು ಬಂದು ಸಿಟಿ ಬಸ್ ಸ್ಟ್ಯಾಂಡ್ ಬೆಳಗಾವಿಗೆ ಬಿಟ್ಟನು ಎಂದು ಹೇಳಿದ್ದಾರೆ.

ಪ್ರಶ್ನೆಃ ಬೈಕ ನಂಬರ ನಿಮಗೆ ಹೇಳಲು ಆಗುತ್ತದೆಯೇ?
ಉತ್ತರಃ ಆಗುತ್ತದೆ, ಬೈಕ ನಂಬರ ಕೆಎ-22/ಇವಿ -2912 ಇರುತ್ತದೆ.

24. ಪ್ರೇಮ್ ಎನ್ನುವವರು ಅಂದರೆ ಆರೋಪಿ ಚಿಕ್ಕಮ್ಮನ ಮಗ ನನ್ನನ್ನು ಕರೆದುಕೊಂಡು ಬಂದು ಬೆಳಗಾವಿ ಬಸ್ ಸ್ಟ್ಯಾಂಡ್‌ಗೆ ಬಿಟ್ಟನು.

25. ಬಸ್ ಸ್ಟ್ಯಾಂಡ್‌ನಲ್ಲಿ ಬೇರೆ ಯಾರು ಇದ್ದರು ಎನ್ನುವುದಕ್ಕೆ ಸಾಕ್ಷಿ ಪರಶುರಾಮ ರಾಮಜಿ, ಕಂಪ್ಯೂಟರ ಆಪರೇಟರ ರಾಜು, ಆರೋಪಿಯ ತಂದೆ, ಆರೋಪಿಯ ಮಾವ, ಆರೋಪಿಯ ಚಿಕ್ಕಮ್ಮ ಮತ್ತು ಅವರ ಮಗ ಮತ್ತು ಆರೋಪಿ ಸಂಜು ಡಬಾಲಿ ಇದ್ದರು. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ, ಅವರು ಯಾರೂ ಇರಲಿಲ್ಲ ಎನ್ನುವುದು ಸರಿಯಲ್ಲ.

26. ಬೆಳಗಾವಿ ಸಿಟಿ ಬಸ್ ಸ್ಟ್ಯಾಂಡ್ ಪಕ್ಕದಲ್ಲಿ ಪೋಲಿಸ ಠಾಣೆ ಇದೆ ಎನ್ನುವುದಕ್ಕೆ ಸಾಕ್ಷಿ ಇರಬಹುದು ನಾನು ನೋಡಿಲ್ಲ ಎಂದು ಹೇಳಿದ್ದಾರೆ.

27. ಸಿಟಿ ಬಸ್ ನಿಲ್ದಾಣದಿಂದ ನೀವು ಎಲ್ಲಿಗೆ ಹೇಗೆ ಹೋಗಿದ್ದೀರಿ ಎನ್ನುವುದಕ್ಕೆ ಸಾಕ್ಷಿ ನಾನು ಬಸ್ಸಿನಲ್ಲಿ ಮನೆಗೆ ಹೋಗಿದ್ದೇನೆ ಎಂದು ಹೇಳಿದ್ದಾರೆ.

28. ಮನೆಗೆ ಹೋಗಿ ಏನು ಮಾಡಿದ್ದೀರಿ ಎನ್ನುವುದಕ್ಕೆ ಸಾಕ್ಷಿ ನಮ್ಮ ತಂದೆ ತಾಯಿಗೆ ವಿಚಾರ ಹೇಳಿದ್ದೇನೆ ಎಂದು ಉತ್ತರಿಸಿದ್ದಾರೆ. ಆಗ ಸಮಯ ಎಷ್ಟಾಗಿತ್ತು ಎನ್ನುವುದಕ್ಕೆ ಸಾಕ್ಷಿ ಸುಮಾರು 4:00 ಗಂಟೆ ಆಗಿತ್ತು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

29. ಆರೋಪಿಗೆ ನೀವು ಯಾವ ರೀತಿ ಕಾಲ್ ಮಾಡಿದ್ದೀರಿ ಎನ್ನುವುದಕ್ಕೆ ಸಾಕ್ಷಿ ನಾನು ಮನೆಯ ಮುಂದೆ ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ವ್ಯಕ್ತಿಯಿಂದ ಮೊಬೈಲ ಫೋನ ತೆಗೆದುಕೊಂಡು ಆರೋಪಿಗೆ ಮಾತನಾಡಿದ್ದೇನೆ.

30. ದಿನಾಂಕಃ 13-12-2023 ರಂದು ನಮ್ಮ ತಂದೆ ಆರೋಪಿ ಸಂಜು ಡಬಾಲಿ ಅವರ ಫೋನಗೆ ಫೋನ ಮಾಡಿದ್ದರು, ಆದರೆ ಎಷ್ಟು ಗಂಟೆಗೆ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಅದರ ವಿವರಗಳನ್ನು ನಾನು ಪೋಲಿಸರಿಗೆ ನೀಡಿಲ್ಲ ಎನ್ನುವುದು ಸರಿ.

31. ನಮ್ಮ ತಂದೆಯವರು ಪರಶುರಾಮ ರಾಮಜಿ ಅವರಿಗೂ ಫೋನ ಮಾಡಿ ವಿಚಾರಿಸಿದ್ದಾರೆ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಫೋನ ರಿಸಿವ್ ಮಾಡದೇ ಇದ್ದ ಕಾರಣ ಪರಶುರಾಮ ರಾಮಜಿ ಅವರಿಗೆ ಫೋನ ಮಾಡಿ ವಿಚಾರಿಸಿದ್ದಾರೆ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

32. ತಹಶೀಲ್ದಾರ ರಾಕೇಶ ಬುವಾ[ಚಾಸಾಃ17] ಅವರಿಗೆ ನಮ್ಮ ತಂದೆ ಫೋನ ಮಾಡಿರುವುದಿಲ್ಲ. ನನ್ನ ಮತ್ತು ಆರೋಪಿಯ ಮದುವೆ ಬಗ್ಗೆ ಚಾಸಾಃ 17 ರವರಿಗೆ ಗೊತ್ತಿಲ್ಲ ಎನ್ನುವುದು ಸರಿ. ಚಾಸಾಃ17 ರವರು ನಮ್ಮ ತಂದೆಯೊಂದಿಗೆ ಮಾತನಾಡಿದ ವಿಚಾರ ನನಗೆ ಗೊತ್ತಿರುವುದಿಲ್ಲ.

33. ನನ್ನ ಮುಖ್ಯ ವಿಚಾರಣೆಯ ಎರಡನೇ ಖಂಡಿಕೆಯಲ್ಲಿ ಹೇಳಿದಂತೆ ಚಾಸಾಃ17 ಅವರು ನಮ್ಮ ತಂದೆಗೆ ಪೋನ ಮಾಡಿ ನೀವು ಪರಿಶಿಷ್ಟ ಜಾತಿಯವರು ಇದ್ದೀರಿ, ನಿಮ್ಮ ಮಗಳು ಸಂಜು ಡಬಾಲಿ ಅವರನ್ನು ಮದುವೆ ಮಾಡಿಕೊಂಡರೆ ಆತನ ತಂದೆ ತಾಯಿ ವಿಷ ಕುಡಿದು ಸಾಯುತ್ತಾರೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

34. ನಾನು ಪರಿಶಿಷ್ಟ ಜಾತಿಗೆ ಸೇರಿದ ಹುಡುಗಿ ಎಂದು ಗೊತ್ತಿದ್ದರೂ ಸಹ ಆರೋಪಿ ಮೂರು ವರ್ಷದಿಂದ ನನ್ನೊಂದಿಗೆ ಪ್ರೀತಿಯ ನಾಟಕ ಮಾಡುತ್ತಾ ಬಂದಿದ್ದು, ಆತನಿಗೆ ಮದುವೆ ಆಗು ಎಂದು ಕೇಳಿದಾಗ, ನಾನು ಕೀಳು ಜಾತಿಯವಳು ಎಂದು ಮದುವೆ ಆಗಲು ನಿರಾಕರಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

35. ನಾನು ಮೊದಲ ಬಾರಿಗೆ ಕಂಪ್ಲೇಂಟ್ ನೀಡಲು ದಿನಾಂಕಃ14-12-2023 ರಂದು ಪೋಲಿಸ ಠಾಣೆಗೆ ಹೋಗಿದ್ದೇನು, ಆದರೆ ಆ ದಿನ ಪೋಲಿಸರು ದೂರನ್ನು ಸ್ವೀಕರಿಸಿರುವುದಿಲ್ಲ. ಆ ದಿನ ದೂರು ಕೊಡಲು ನಾನು, ನನ್ನ ತಂದೆ ಮತ್ತು ನನ್ನ ತಾಯಿ ಹೋಗಿದ್ದೇವು. ದೂರು ಕೊಡಲು ಬೆಳಗ್ಗೆ 10:00 ಗಂಟೆಗೆ ಹೋಗಿದ್ದೇವು.

36. ಪೋಲಿಸರು ದೂರನ್ನು ಪಡೆದು ಸ್ವೀಕರಿಸಿರುವುದಿಲ್ಲ, ಹುಡುಗನನ್ನು ಕರೆಸಿ ಮದುವೆ ಮಾಡಿಸುತ್ತೇವೆ ಎಂದು ಹೇಳಿ ಕಳುಹಿಸಿದರು ಎಂದು ಸಾಕ್ಷಿ ಸ್ವತಃ ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಪೋಲಿಸರು ನನಗೆ ಈ ದಿನ ಆರೋಪಿಯನ್ನು ಕರೆಸುತ್ತೇವೆ, ನಾಳೆ ಕರೆಸುತ್ತೇವೆ ಎಂದು ಪೋಲಿಸರು 3 ತಿಂಗಳು ಓಡಾಡಿಸಿದ್ದಾರೆ.

37. ದಿನಾಂಕಃ 16-12-2023 ರಂದ ಪೋಲಿಸರು ನನಗೂ ಮತ್ತು ಆರೋಪಿಗೂ ಮದುವೆ ಮಾಡಿಸುತ್ತೇವೆ ಎಂದು ರಾಜಿ ಪತ್ರ ಬರೆಸಿಕೊಂಡಿದ್ದಾರೆ ಎಂದು ಸಾಕ್ಷಿ ಸ್ವತಃ ಹೇಳಿದ್ದಾರೆ.

ಪ್ರಶ್ನೆಃ ರಾಜಿ ಮಾಡಿಸುವ ಸಮಯದಲ್ಲಿ ಯಾರು ಯಾರು ಇದ್ದರು?
ಉತ್ತರಃ ನಾನು, ನಮ್ಮ ತಂದೆ, ತಾಯಿ, ಪಂಚರಾದ ನಾಗನಗೌಡ ಶಂಕರಗೌಡ ಪಾಟೀಲ ಮತ್ತು ಉಡಚಪ್ಪ ಪರಮೇಶ್ವರಪ್ಪ ಪಾರ್ವತಮ್ಮನವರು ಇದ್ದರು.

ಪ್ರಶ್ನೆಃ ರಾಜಿ ಪತ್ರಕ್ಕೆ ಪೋಲಿಸರು ಯಾರ ಯಾರ ಸಹಿ ಪಡೆದುಕೊಂಡಿದ್ದಾರೆ.
ಉತ್ತರಃ ನನ್ನ ಮತ್ತು ನನ್ನ ತಂದೆ ತಾಯಿಯ ಸಹಿ ಮಾಡಿಸಿಕೊಂಡಿದ್ದಾರೆ, ಬೇರೆಯವರ ಸಹಿ ಮಾಡಿಸಿಕೊಂಡಿರುವುದಿಲ್ಲ.

38. ರಾಜಿ ಪತ್ರವನ್ನು ಕನ್ನಡದಲ್ಲಿ ಬರೆಯಲಾಗಿತ್ತು. ಆ ಪತ್ರವನ್ನು ಒಂದೇ ಪುಟದಲ್ಲಿ ಬರೆಯಲಾಗಿತ್ತು. ನಾನು ಅದನ್ನು ಬರೆಯುವಾಗ ನಾನು ಓದಿದ್ದೇನೆ, ಆದರೆ ಈಗ ನನಗೆ ನೆನಪಿರುವುದಿಲ್ಲ. ಸಾಕ್ಷಿ ಮುಂದುವರೆದು ರಾಜಿ ಪತ್ರವನ್ನು ನಾನೇ ಬರೆದಿದ್ದೇನೆ ಎಂದು, ನಾನು ಟೆನಶೆನ್ ನಲ್ಲಿ ಏನು ಬರೆದಿದ್ದೇನೆ ಎಂದು ಈಗ ನನಗೆ ನೆನಪಿರುವುದಿಲ್ಲ. ಪೋಲಿಸರು ಹೇಳಿದಂತೆ ನಾನು ಬರೆದಿದ್ದೇನೆ. ನಾನು 5-6 ನಿಮಿಷದಲ್ಲಿ ಬರೆದಿದ್ದೇನೆ.

39. ದಿನಾಂಕಃ16-12-2023 ರಂದು ನಾನು ದೂರು ನೀಡಲು ಹೋಗಿದ್ದ ಪ್ರಕರಣವೇ ಈಗ ನಡೆಯುತ್ತಿರುವುದು. ಆ ಪ್ರಕರಣ ಬೇರೆ ಮತ್ತು ಈ ಪ್ರಕರಣ ಬೇರೆ ಎನ್ನುವುದು ಸರಿಯಲ್ಲ. ಪೋಲಿಸ ಠಾಣೆಯಲ್ಲಿ ನೀವು ಏನೆಂದು ದೂರು ಬರೆದುಕೊಟ್ಟಿದ್ದೀರಿ ಎನ್ನುವುದಕ್ಕೆ ಸಾಕ್ಷಿ ನನ್ನ ಮತ್ತು ಆರೋಪಿಯ ಮದುವೆಗೆ ತಕರಾರು ಇಲ್ಲ ಎಂದು ಬರೆದುಕೊಟ್ಟಿದ್ದೇನೆ ಎಂದು ಹೇಳಿ ಮುಂದುವರೆದು ಆ ದಿನ ಟೆನಶನ್‌ನಲ್ಲಿ ಏನು ಬರೆದುಕೊಟ್ಟೆ ಎಂದು ಸರಿಯಾಗಿ ನೆನಪಿಲ್ಲ ಎಂದು ಹೇಳಿದ್ದಾರೆ.

40. ನಮ್ಮ ತಂದೆ ಸಮಾಜ ಸೇವಕ ಎನ್ನುವುದು ಸರಿ. ನಮ್ಮ ತಂದೆ ಜನರೊಂದಿಗೆ ಮತ್ತು ಸಂಘಟನೆಗಳೊಂದಿಗೆ ಓಡಾಡುತ್ತಾರೆ ಎನ್ನುವುದು ಸರಿ. ಯಾವುದಾದರೂ ದೂರುಗಳು ಬಂದಾಗ ಅವರೊಂದಿಗೆ ಪೋಲಿಸ ಠಾಣೆಗೆ ಹೋಗುತ್ತಾರೆ ಎನ್ನುವುದು ಸರಿ.

41. ದಿನಾಂಕಃ 16-12-2023 ರಂದು ಪೋಲಿಸರು ನನ್ನ ದೂರನ್ನು ಪಡೆಯಲು ನಿರಾಕರಿಸಿದ್ದಾರೆ ಎಂದು ಹೇಳಿ ಮೇಲಿನ ಅಧಿಕಾರಿಗಳಿಗೆ ದೂರು ನೀಡಲು ನಮಗೆ ತೊಂದರೆ ಇರಲಿಲ್ಲ ಎನ್ನುವುದು ಸರಿ.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.